# ೨೧ನೆಯ ಶತಮಾನದ ಕನ್ನಡ ನಾಟಕ ಮತ್ತು ರಂಗಭೂಮಿಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್

**ನಾಗೇಶ್ ಎನ್.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15504329

## ABSTRACT:

ರಂಗಭೂಮಿಯೊಂದು ಜಾಗತೀಕ ಕಲಾಭಿವ್ಯಕ್ತಿ ಮಾಧ್ಯಮವಾಗಿದೆ, ನಾಟಕವು ಜಗತ್ತಿನ ಸಾಂಸ್ಕೃತಿಕ ಸೃಜನಶೀಲತೆಯ ಅಸ್ಮಿತೆಯ ಭಾಗವಾಗಿ ಲೋಕದರ್ಶನವನ್ನು ಒಡಮೂಡಿಸುವಲ್ಲಿ ಪ್ರಮುಖ ಸಾಹಿತ್ಯ ಪ್ರಕಾರವಾಗಿದೆ. ಶ್ರೇಷ್ಠ ದಾರ್ಶನಿಕರಾದ ಬುದ್ಧ, ಬಸವಣ್ಣ, ಡಾ. ಬಿ. ಆರ್. ಅಂಬೇಡ್ಕರ್, ಜ್ಯೋತಿ ಬಾ ಪುಲೆ, ಪೆರಿಯಾರ್, ನಾರಾಯಣಗುರುಗಳಂತಹ ಆದರ್ಶಪ್ರಾಯರಾದವರ ಜೀವನ ಆಧಾರಿತ ನಾಟಕಗಳನ್ನು ರಂಗರೂಪಕ್ಕೆ ತಂದು ಸಮುದಾಯಗಳತ್ತ ತೆಗೆದುಕೊಂಡು ಹೋಗುವ ಅನಿವಾರ್ಯತೆ ಈ ನಾಡಿಗಿದೆ.

ಅಂಬೇಡ್ಕರ್ ಅವರು 'ತಳಸಮುದಾಯಗಳಿಗೆ ಮಾತ್ರವಲ್ಲದೆ ಎಲ್ಲ ಸಮುದಾಯಗಳಿಗೂ ಅಕ್ಷರದ ಮೂಲಕ ವಿಮೋಚನೆ ಸಾಧ್ಯ' ಎಂಬುದನ್ನು ತಿಳಿಸಿಕೊಟ್ಟರು. ಇವರ ಬದುಕು, ಬರಹ ಮತ್ತು ಭಾಷಣಗಳಲ್ಲಿನ ಚಿಂತನಾಧಾರೆಗಳನ್ನು ಕನ್ನಡ ನಾಟಕ ಮತ್ತು ರಂಗಭೂಮಿಗೆ ಅಳವಡಿಕೊಳ್ಳುವುದರ ತುರ್ತು ಇದೆ. ಈ ನಿಟ್ಟಿನಲ್ಲಿ ಸಾಕಷ್ಟು ರಂಗಕರ್ಮಿಗಳು ಮತ್ತು ನಾಟಕಕಾರರು ದಾಪುಗಾಲು ಇಟ್ಟಿರುವುದು ಭವಿಷ್ಯದ ಭರವಸೆಯ ಧ್ಯೋತಕವಾಗಿದೆ.

ಹೊಸ ತಲೆಮಾರಿನ ರಂಗ ನಿರ್ದೇಶಕರಾದ ಕೆ. ಪಿ. ಲಕ್ಷ್ಮಣ್ ಅವರು ತಮ್ಮ ರಂಗರೂಪಗಳಾದ 'ದಕ್ಲಕಥಾ ದೇವಿ ಕಾವ್ಯ', 'ಪಂಚಮ ಪದ' ಮತ್ತು 'ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ' ನಾಟಕಗಳಲ್ಲಿ ಡಾ ಬಿ. ಆರ್, ಅಂಬೇಡ್ಕರ್ ಅವರ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಂಡಿರುವುದು ವಿಶೇಷವಾಗಿದೆ. 'ಪಂಚಮ ಪದ' ರಂಗರೂಪದಲ್ಲಿ ತಳಸಮುದಾಯಗಳ ಜೀವನಚರಿತ್ರೆಯನ್ನು ದೃಶ್ಯಕಾವ್ಯವಾಗಿಸಿರುವುದು ದಲಿತ ಚಳುವಳಿಗಳು ರೂಪುಗೊಂಡ ಇತಿಹಾಸವನ್ನು ನೆನಪಿಸುತ್ತದೆ. ಈ ರಂಗರೂಪವು ವ್ಯಕ್ತಿ ಘನತೆಯ ಗುರುತುಗಳನ್ನು ಕಂಡುಕೊಳ್ಳುವ ಮಾರ್ಗವಾಗಿದೆ. ಈಗೆ ಹಲವಾರು ನಾಟಕಕಾರರು ಹಾಗೂ ನಾಟಕಕಾರ್ತಿಯರು ತಮ್ಮ ನಾಟಕಗಳಲ್ಲಿ ಸಂವಿಧಾನಾತ್ಮಕ ಚಿಂತನೆಗಳ ಎಳೆಗಳನ್ನು ತಂದಿರುವುದು ಗುರುತಿಸಬಹುದು.

## KEYWORDS:

ವಿಮೋಚನೆ, ಸಾಂವಿಧಾನಿಕ, ಚಾತುರ್ವರ್ಣ, ಸಂಘಟನಾತ್ಮಕ, ಅಸ್ಪೃಶ್ಯತಾ ನಿವಾರಣೆ.

ರಂಗಭೂಮಿಯು ಒಂದು ಜೀವಂತ ಕಲೆಯಾಗಿದೆ. ಸಾಹಿತ್ಯ ಪ್ರಕಾರಗಳಲ್ಲೊಂದಾದ ನಾಟಕ ಇದರ ಭಾಗವಾಗಿದೆ. 'ಹಲವು ಕೃತಿಗಳು ಬೀರಬಲ್ಲ ಪ್ರಭಾವವನ್ನು ನಾಟಕಗಳು ಬೀರುತ್ತವೆ' ಎನ್ನುವ ಮಾತಿದೆ. ಭಾರತೀಯ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂದರ್ಭಕ್ಕೆ ಈ ಮಾತು ಅಕ್ಷರಶಃ ಅನ್ವಯವಾಗುತ್ತದೆ. ಆಧುನಿಕ ಸಂದರ್ಭಕ್ಕೆ ಬಂದಾಗ ನಾಟಕವು ಪ್ರತ್ಯೇಕತೆಯನ್ನು ಗುರುತಿಸಿಕೊಂಡು ನಾಟಕಕಾರರನ್ನು, ಓದುಗರನ್ನು, ನೋಡುಗರನ್ನು ತನ್ನತ್ತ ಸೆಳೆದುಕೊಂಡಿದೆ.

ಸಮಕಾಲೀನ ಸಾಮಾಜಿಕ ಅಸಮಾನತೆ ಮತ್ತು ರಾಜಕೀಯ ವಿಷಮತೆಯ ವಿರುದ್ಧ ಹೋರಾಟ ರೂಪಿಸಬೇಕಾದರೆ, ಸಮುದಾಯಗಳ ನೈತಿಕ ಬೆಂಬಲ ಅತ್ಯಗತ್ಯವಾಗುತ್ತದೆ. ಶೋಷಕ ವ್ಯವಸ್ಥೆಯು ಅಧಿಕಾರಸ್ಥೆ ಮನೋಧರ್ಮದಿಂದ ಇಡೀ ವ್ಯವಸ್ಥೆಯನ್ನು ತನ್ನ ಕಪಿಮುಷ್ಠಿಗೆ ತಂದುಕೊಳ್ಳುತ್ತದೆ. ಇಂತಹ ವ್ಯವಸ್ಥೆಯ ವಿರುದ್ಧ ತಮ್ಮ ಜೀವಮಾನದುದ್ದಕ್ಕೂ ಹೋರಾಡಿ ಈ ದೇಶದ ಬಹುಸಂಖ್ಯಾತರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕವಾದ ನ್ಯಾಯವನ್ನು ಒದಗಿಸಿದವರಲ್ಲಿ ೨೦ನೆಯ ಶತಮಾನದಲ್ಲಿ ಡಾ ಬಿ. ಆರ್. ಅಂಬೇಡ್ಕರ್ ಅವರು ಅಗ್ರಮಾನ್ಯರು.

ಸಾಮಾನ್ಯವಾಗಿ ನಾಟಕಕಾರರು ಅಂಬೇಡ್ಕರ್ ಅವರ ಜೀವನ ಸಾಧನೆಗಳೊಂದಿಗೆ ಶಿಕ್ಷಣ, ಸಂಘಟನೆ ಮತ್ತು ಹೋರಾಟ, ಸ್ವಾತಂತ್ರ್ಯ, ಸಮಾನತೆ, ಮಹಿಳಾ ಸಬಲೀಕರಣ, ಅಂಬೇಡ್ಕರ್ ಮತ್ತು ರಮಾಬಾಯಿ, ಅಂಬೇಡ್ಕರ್ ಮತ್ತು ಗಾಂಧೀ ಮುಖಾಮುಖಿ, ವೀಸಾ ನಿರೀಕ್ಷೆಯಲ್ಲಿ, ಹಿಂದೂ ಕೋಡ್ ಬಿಲ್, ಮೀಸಲಾತಿ ಮುಂತಾದ ವಿಷಯಗಳನ್ನು ನಾಟಕದ ವಸ್ತುವಾಗಿಸುತ್ತಾರೆ. ಇದಲ್ಲದೆ ಅಂಬೇಡ್ಕರ್ ಅವರ ಸಮಗ್ರ ಬದುಕು ಮತ್ತು ಬರಹವನ್ನು ರಂಗದ ಮೇಲೆ ತರಲು ಬಹುಶಃ ಅಸಾಧ್ಯ ಎನ್ನಿಸುತ್ತದೆ.

ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲಿ ಇದುವರೆಗೂ ಅಂಬೇಡ್ಕರ್ ಅವರನ್ನು ಕುರಿತ ನಾಟಕಗಳನ್ನು ಗಮನಿಸುವುದಾದರೆ, ನವೋದಯ ಪೂರ್ವದಲ್ಲಿ ಸುಮಾರು ೧೯೨೦ರಲ್ಲಿ ದೇವರಾಯ ಇಂಗಳೆ ಅವರ 'ಬಹಿಷ್ಕೃತ ಭಾರತ', ಡಿ. ಗುರುರತ್ನ ಬಾಬು ಅವರ 'ಭಾರತದ ಜೀವಂತ ಧ್ವನಿ'(೧೯೯೦), ವಿ ಮುನಿವೆಂಕಟಪ್ಪ ಅವರ 'ಬಾಲಕ ಅಂಬೇಡ್ಕರ್'(೧೯೯೪), ಎಲ್ ಹನುಮಂತಯ್ಯ ಅವರ 'ಅಂಬೇಡ್ಕರ್'(೧೯೯೮), ಮ. ನ. ಜವರಯ್ಯ ಅವರ 'ಯುಗಾಂತರ'(೨೦೦೭), ಡಿ. ಗೋವಿಂದ ದಾಸ್ ಅವರ 'ನಡುನೀರಿನ ಹಡಗು'(೨೦೦೭), ಟಿ ಹಾಲ್ಕುರಿಕೆ ಶಿವ ಶಂಕರ್ ಅವರ 'ಕೋರೆಗಾಂವ್'(೨೦೧೦), ಸಿದ್ರಾಮ ಕಾರಣಿಕ ಅವರ 'ಮಿಸಸ್ ಅಂಬೇಡ್ಕರ್'(೨೦೧೪), ಎಂ. ಭಾಸ್ಕರ್ ಅವರ 'ನೀರು ಬೇಕು ನೀರು'(೨೦೧೭), ಡಾ. ಸುಧಾಕರ ಹೊಸಳ್ಳಿ ಮತ್ತು ಪ್ರವೀಣ್ ಕುಮಾರ್ ಮಾವಿನಕಾಡು ಅವರ 'ಅವಿತಿಟ್ಟ

ಅಂಬೇಡ್ಕರ್'(೨೦೨೧), ರಾಜಪ್ಪ ದಳವಾಯಿ ಅವರ 'ವೀ ದ ಪೀಪಲ್ ಆಫ್ ಇಂಡಿಯಾ'(೨೦೨೩), ಕೆ ರಾಮಯ್ಯ ಅವರ 'ನನ್ನ ಅಂಬೇಡ್ಕರ್' ಸೇರಿದಂತೆ ಕೃಷ್ಣ ಜನಮನ ಅವರ 'ವೀಸಾ ನಿರೀಕ್ಷೇಯಲ್ಲಿ' ಮತ್ತು 'ಅಂಬೇಡ್ಕರ್ ಕೊನೆಯ ದಿನಗಳು', ಗಿರೀಶ್ ಮಾಚಳ್ಳಿ ಅವರ 'ಆರ್ಯ ಮತ್ತು ದ್ರಾವಿಡ' ಬೇಲೂರು ರಘುನಂದನ್ ಅವರ ನಿರ್ದೇಶನದ 'ಅಕ್ಕಯ್', ಕೆ. ಪಿ. ಲಕ್ಷಣ್ ಅವರ ನಿರ್ದೇಶನದ 'ದಕ್ಲಕಥಾ ದೇವಿ ಕಾವ್ಯ', 'ಪಂಚಮ ಪದ' ಮತ್ತು 'ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ' ಮುಂತಾದ ನಾಟಕ ಮತ್ತು ರಂಗ ಪ್ರಯೋಗಗಳಲ್ಲಿ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಅಳಡಿಸಿಕೊಳ್ಳಲಾಗಿದೆ. ಈ ಲೇಖನದಲ್ಲಿ ಆಯ್ದ ಕೆಲವು ನಾಟಕಗಳನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

'ದಲಿತರ ವಿಮೋಚನೆಯಾಗದೆ ಇಡೀ ಭಾರತೀಯ ಸಮಾಜದ ವಿಮೋಚನೆ ಸಾಧ್ಯವಿಲ್ಲ'ವೆಂದು ಅಂಬೇಡ್ಕರ್ ಅವರು ನಂಬಿದ್ದರು. ೧೯೪೨ರ ಜುಲೈ ತಿಂಗಳಲ್ಲಿ ೧೮ ರಿಂದ ೨೦ ರವರೆಗೆ ನಾಗಪುರದಲ್ಲಿ ನಡೆದ All India Depressed Class Conference ನಲ್ಲಿ ಮಾತನಾಡುತ್ತಾ ಡಾ. ಬಿ.ಆರ್. ಅಂಬೇಡ್ಕರ್ ಅವರು"My final words of advise to you is educate, agitate, organize, have faith in yourselves and never loose hope. I shall always be with You as I know you will be with me" (Volume–17, part–3, page–276) ಎಂಬ ಸಂದೇಶವನ್ನು ನಮಗೆ ನೀಡಿದ್ದಾರೆ. ಈ ಮೂಲಕ ಜಾಗೃತರಾಗಿ, ಚಿಂತನೆಮಾಡಿ, ಸಂಘಟಿತರಾಗಿ ಎಂಬ ಸೂತ್ರಗಳನ್ನು ಕೊಟ್ಟಿದ್ದಾರೆ. ಅಂಬೇಡ್ಕರ್ ಅವರು ತಮ್ಮ ಜೀವಿತಾವಧಿಯಲ್ಲಿ ಸಂಘಟಿತ ಹೋರಾಟದಿಂದ ದೇವಸ್ಥಾನ ಪ್ರವೇಶ, ಕರೆ–ಬಾವಿ ನೀರಿನ ಬಳಕೆ, ಮನುಸ್ಮೃತಿ ಸುಟ್ಟಿದ್ದು ಮೊದಲಾದ ಹೋರಾಟಗಳನ್ನು ರೂಪಿಸಿದರು. ಹಿಂದೂ ಧರ್ಮದ ಚಾತುರ್ವರ್ಣದ ಚೌಕಟ್ಟಿನಿಂದ ದಲಿತರನ್ನು ಹೊರತರಲು ಬೌದ್ಧ ಧರ್ಮ ಸ್ವೀಕಾರದ ಮಾರ್ಗ ಸೂಚಿಸಿದರು. ಮುಂದೆ ಇದನ್ನೇ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂದು ರೂಪಿಸಿಕೊಂಡು ದಲಿತರು ತಮ್ಮ ಸಾಂವಿಧಾನಿಕ ಹಕ್ಕುಗಳಿಗಾಗಿ ಇಂದಿಗೂ ಹೋರಾಟ ಮಾಡುತ್ತಿದ್ದಾರೆ. ಈ ವಿಮೋಚನೆಯೂ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ಮೂಲಕ ಸಾಧ್ಯ ಎಂಬುದನ್ನು ದಲಿತಪರ ಸಂಘಟನೆಗಳು ತೋರಿಸಿಕೊಟ್ಟಿವೆ.

ಎಲ್ ಹನುಮಂತಯ್ಯ ಅವರು 'ಅಂಬೇಡ್ಕರ್' ನಾಟಕದಲ್ಲಿ ಶೈಕ್ಷಣಿಕ ಮಹತ್ವವನ್ನು ಸಾರಲು ಮುತ್ತಯ್ಯ ಮತ್ತು ಪೆರಿಯಾರ್ ಪಾತ್ರಗಳನ್ನು ತರುತ್ತಾರೆ.

"ಮುತ್ತಯ್ಯ: ಕೋಟ್ಯಾಂತರ ಹಣ ಖರ್ಚು ಮಾಡಿ ದೇವಸ್ಥಾನಗಳನ್ನು ಕಟ್ಟಿಕೊಂಡು ಪುಣ್ಯ ಸಂಪಾದಿಸುತ್ತಿರುವ ಮಹಾತ್ಮರು ಶಾಲೆಗಳನ್ನು ಆಸ್ಪತ್ರೆಗಳನ್ನು

ಕಟ್ಟಿಸುತ್ತಿಲ್ಲ ಯಾಕೆ?

ಪೆರಿಯಾರ್: ಅಹಂ ಅದನ್ನೆ ನಾನು ಹೇಳುತ್ತಿರುವುದು ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ಉಳಿಸಿಕೊಳ್ಳಬೇಕೆಂದು ಮಾತನಾಡುವ ಮಹಾನ್ ಪಂಡಿತರೂ ಕೂಡ ಕಣ್ಣಿಗೆ ಮಣ್ಣೆರಚುವ ಕಥೆ ಹೇಳುತ್ತಾರೆ. ಪುರಾಣದ ಘಟನೆಗಳಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶಕ್ಕೆ ಸಂಬಂಧಿಸಿದಂತೆ ಭಗವಂತನು ಅವರಿಗೆ ಅನುಗ್ರಹ ಮತ್ತು ಮೋಕ್ಷ ಕರುಣಿಸಿರುವನೆಂದು ಹೇಳಲಾಗಿದೆ''೧ (ಅಂಬೇಡ್ಕರ್, ಎಲ್ ಹನುಮಂತಯ್ಯ, ಪು–೨೫) ಎನ್ನುತ್ತಾರೆ.

ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಮಂದಿರ ಮಸೀದಿಗಳನ್ನು ಕಟ್ಟಿಸಿ ಜನರನ್ನು ಮೂರ್ಖರಾಗಿಸುವ ದೊಡ್ಡ ಮೂಲಭೂತವಾದಿಗಳ ಪರಂಪರೆಯೇ ನಮ್ಮ ನಡುವೆ ಇದೆ. ದೇವಸ್ಥಾನ ಮಂದಿರಗಳಲ್ಲಿ ದೇವರ ದರ್ಶನಕ್ಕೆ ಸಾಲುಗಳು ಇರುವಷ್ಟು ಗ್ರಂಥಾಲಯಗಳ ಮುಂದೆ ಇದ್ದಿದ್ದರೇ, ನಮ್ಮ ದೇಶ ಭವಿಷ್ಯವೇ ಬದಲಾಗುತ್ತಿತ್ತು.

'ಭಾರತದ ಜೀವಂತ ಧ್ವನಿ' ನಾಟಕದಲ್ಲಿ ಅಂಬೇಡ್ಕರ್ ಅವರು ಬರೋಡಾದ ಮಹಾರಾಜರ ಸಹಾಯದಿಂದ ವಿದೇಶಕ್ಕೆ ಹೋಗಿ ವಿದ್ಯಾಭ್ಯಾಸ ಮುಗಿಸಿ ಮತ್ತೆ ಬರೋಡಾದಲ್ಲಿ ಕೆಲಸಕ್ಕೆ ಬಂದಾಗ ಅಲ್ಲಿನ ಸವರ್ಣಿಯರಿಂದ ಅವಮಾನಿತರಾಗುತ್ತಾರೆ. ಕೊನೆಗೆ ಮಹಾರಾಜರ ಗಮನಕ್ಕೆ ವಿಷಯ ಮುಟ್ಟಿಸಿ ಅಲ್ಲಿಂದ ಮುಂಬೈಗೆ ವಾಪಸ್ಸು ಆಗುತ್ತಾರೆ. ಈ ಸಂದರ್ಭದಲ್ಲಿನ ಅವರಾಡಿದ ಮಾತು ''ನನ್ಜನ ಸ್ವಾಭಿಮಾನಿಗಳಾಗ್ಬೇಕು, ಸ್ವಸಾಮರ್ಥ್ಯದಿಂದ ಬದುಕ್ಬೇಕು. ಜಾತಿ ಜಾಡ್ಯ, ಅಸ್ಪೃಶ್ಯತಾ ನಿವಾರಣೆ ಇವೆ ತಂತ್ರಗಳು ಸ್ವಾಭಿಮಾನಿಯಾದ ಮಾನವ ಪರರ ಹಂಗನ್ನು ಎಂದೂ ಬಯಸುವುದಿಲ್ಲ; ಘನತೆಗೆ ಕುಂದು ಬಾರಲಾರದು; ಆಗಲೇ ಅವರು ಎಲ್ಲರ ಗೌರವಕ್ಕೆ ಪಾತ್ರನಾಗುತ್ತನೆ...'' ('ಭಾರತದ ಜೀವಂತ ಧ್ವನಿ', ಡಿ ಗುರುರತ್ನ ಬಾಬು, ಪುಟ–೪೯) ಶಿಕ್ಷಣದ ಮೂಲಕ ಮಾನವನ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂಬುದನ್ನು ಅಂಬೇಡ್ಕರ್ ಅವರು ನಂಬಿದ್ದರು.

ಡಾ. ಟಿ. ಎಂ. ಭಾಸ್ಕರ್ ಅವರ ನಾಟಕವಾದ 'ನೀರು ಬೇಕು ನೀರು'ದಲ್ಲಿ ಅಂಬೇಡ್ಕರ್ ಅವರು ನೀರಿನ ಬಗ್ಗೆ ''ಈ ದೇಶದಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲವೇ?

ಹಾಂ! ನೆನಪಾಯಿತು

ನಮ್ಮ ಹಿರಿಯರು ಆಗಾಗ ಹೇಳುತ್ತಿದ್ದರು

ಈ ಭರತ ಭೂಮಿಯಲ್ಲಿ ಉಂಡುಟ್ಟು ಸತ್ತವರಕ್ಕಿಂತಲೂ

ಹೊಟ್ಟೆಗೆ ನೀರು ಬೇಡಿ ಸತ್ತವರೇ ಹೆಚ್ಚೆಂದು

ಗಂಗೆ, ತುಂಗೆ, ಯಮುನೆಯರು ಹರಿಯುನ ಈ ದೇಶದಲ್ಲಿಯೇ ನೀರಿಗೂ ಬರವೇ? "(ನೀರು ಬೇಕು ನೀರು, ಡಾ. ಟಿ. ಎಂ. ಭಾಸ್ಕರ್, ಪು–೨೧) ಎಂದು ಪ್ರಶ್ನೆ ಮಾಡುತ್ತಾರೆ. ಭಾರತೀಯ ಸ್ವಾತಂತ್ರ್ಯದ ಸಂದರ್ಭದಲ್ಲಿ ರಾಷ್ಟ್ರೀಯತೆಯ ನಡುವೆ ಸಾಮಾಜಿಕ ಸ್ವಾತಂತ್ರ್ಯವು ಬೇಕೆಂಬ ಆಂತರಿಕ ಹೋರಾಟಗಳು ರೂಪುಗೊಂಡವು. ಇಂತಹ ಸಂದರ್ಭದಲ್ಲಿ ನೀರಿಗಾಗಿ ಅಂಬೇಡ್ಕರ್ ಅವರು ಸಂಘಟನಾತ್ಮಕ ಹೋರಾಟಗಳನ್ನು ರೂಪಿಸಿದರು.

**ಹೊಸ ತಲೆಮಾರಿನ ರಂಗಪ್ರಯೋಗಗಳಲ್ಲಿ ಅಂಬೇಡ್ಕರ್:**

"ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ' ನಾಟಕವು "ಮನವೆಲ್ಲ ಬಯಲಾಗಿ..." ಎಂಬ ಹಾಡಿನ ಮೂಲಕ ಶುರುವಾಗಿ "ನನ್ನ ಹಾಡು ಬೇರೆಯಲ್ಲವೇ? " ಎಂದು ಕೊನೆಗೊಳ್ಳುತ್ತದೆ. ಈ ನಾಟಕ ತಮ್ಮ ಜಾತಿಯ ಗುರುತುಗಳನ್ನು ಮುಚ್ಚಿ ಬಾಡಿಗೆ ಹಂಚಿಕೊಂಡು ಒಂದೇ ಸೂರಿನಡಿ ಬದುಕು ಕಟ್ಟಿಕೊಳ್ಳುವವರ ಅತಂತ್ರ ಜೀವನವನ್ನು ಒಳಗೊಂಡಿದೆ. ಮುಚ್ಚಿಟ್ಟ ಗುರುತುಗಳು ಒಂದೊಂದೇ ತೆರೆದುಕೊಳ್ಳುತ್ತಾ ಪಾತ್ರಗಳು ತಮ್ಮ ಸ್ವಾಭಿಮಾನದ ಬದುಕಿಗೆ ಹಾತೊರೆಯುತ್ತವೆ. ಗುರುತಿನ ಸುತ್ತ ಇರುವ ಹಲವು ಸಂಕೀರ್ಣ ವಿರೋಧಭಾಸಗಳನ್ನು ಎದುರುಗೊಳ್ಳುವ ಕಥನಗಳ ಗೊಂಚಲು ಈ ನಾಟಕ. ಮನೆ ಬಾಡಿಗೆ ನೀಡುವವರ ಆಹಾರ ರಾಜಕಾರಣ ಆಯಾಮದ ಜೊತೆ ಇಲ್ಲಿ ಅಂಬೇಡ್ಕರ್ ಅವರ ಅನುಭವದ ಸಾಲುಗಳು, ಎನ್ ಕೆ ಹನುಮಂತಯ್ಯ ಮತ್ತು ಚಂದ್ರಶೇಖರ ಕೆ ಅವರ ಕಾವ್ಯದ ಸಾಲುಗಳು, ರೋಹಿತ್ ವೇಮುಲನ ಕೊನೆಯ ಮಾತುಗಳು ನಮ್ಮನ್ನು ಇನ್ನಷ್ಟು ಎಚ್ಚರಿಸುತ್ತವೆ.

ಪ್ರೊ ರಾಜಪ್ಪ ದಳವಾಯಿ ಅವರ 'ವೀ ದ ಪೀಪಲ್ ಆಫ್ ಇಂಡಿಯಾ' ನಾಟಕದಲ್ಲಿ ನಿರ್ದೇಶಕರಾದ ಕೆ. ಪಿ ಲಕ್ಷ್ಮಣ್ ಅವರು ಅಂಬೇಡ್ಕರ್ ಅವರ ಸಂವಿಧಾನದ ಆಶಯಗಳ ರಂಗಪ್ರಯೋಗ ಬರಿ ಪ್ರವಚನವಾಗದಂತೆ ನಿರೂಪಿಸಿದ್ದು ಅಚ್ಚರಿಯನ್ನುಂಟು ಮಾಡುತ್ತದೆ. ಬುದ್ಧ, ಬಸವ, ಅಂಬೇಡ್ಕರ್ ಅವರ ಆದರ್ಶ ಪ್ರದಾನವಾದ ಜೀವನ ನಮಗೆಲ್ಲ ದಾರಿ ದೀಪ.

'ದಕ್ಲಕಥಾ ದೇವಿ ಕಾವ್ಯ' ನಾಟಕ ಕಟ್ಟುವ ಕ್ರಮದಲ್ಲಿ ಕೆ. ಪಿ. ಲಕ್ಷ್ಮಣ್ ಅವರು ತಮ್ಮದೇ ಆದ ರಂಗ ಭಾಷೆಯನ್ನು ಹುಡುಕುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇದು ಕೆ. ಬಿ. ಸಿದ್ದಯ್ಯ ಅವರ ಖಂಡಕಾವ್ಯದ ರೂಪಾಂತವಾಗಿದೆ. ಈ ನಾಟಕ ತೆರೆದುಕೊಳ್ಳುವುದೇ ಅರೆ(ಉರುಮೆ) ಮತ್ತು ತಮಟೆಯ ಲಯದ ಮೂಲಕ. ಈ ಶಬ್ಧ ತಳಸಮುದಾಯಗಳ ಒಡಲಿನಿಂದ ಉಕ್ಕುವ ನಿನಾದದಂತೆ ಪ್ರೇಕ್ಷಕರನ್ನು ಆವರಿಸುತ್ತದೆ. ನಾಟಕದಲ್ಲಿ ಅಂಬೇಡ್ಕರ್, ಗಾಂಧೀಯವರ ಉಲ್ಲೇಖವಿದ್ದು

ಅಂಬೇಡ್ಕರ್ ಅವರನ್ನು ತಳಸಮುದಾಯಗಳ ವಿಮೋಚಕರರಾದ ಓದಪ್ಪ ಎಂದು ಕರೆಯಲಾಗಿದೆ. ಹಸಿವು, ಅವಮಾನ, ಅಸ್ಪೃಶ್ಯತೆ, ಕತೆಯಾಗಿ ತಟ್ಟುವುದು. 'ಮುಟ್ಟಿ ನೋಡು, ಮುಟ್ಟುಗೆಟ್ಟು ನೋಡು, ಹುಟ್ಟಿ ನೋಡು, ನನ್ನಂತೆ ಹುಟ್ಟಿ ನೋಡು' ಎನ್ನುವ ದಕ್ಕಲರ ಜೀವನ ದರ್ಶನವಿದೆ.

ಕೆ. ಪಿ. ಲಕ್ಷ್ಮಣ್ ಅವರು ನಿರ್ದೇಶಿಸಿರುವ ಮತ್ತೊಂದು ರಂಗರೂಪ 'ಪಂಚಮ ಪದ' ಇದು ದಲಿತ ಚಿಂತನೆಗಳು ಮತ್ತು ದಲಿತರ ಜೀವನ ಗಾಥಾವನ್ನು ನಮ್ಮ ಮುಂದೆ ತೆರೆದಿಡುತ್ತದೆ. ಇಲ್ಲಿ ಕಾವ್ಯ, ಹೋರಾಟದ ಹಾಡು, ಸಂಗೀತದ ಜೊತೆಗೆ ದಲಿತ ಜಗತ್ತಿನ ಕರುಳಿನ ಕಥೆಗಳ ಚಿತ್ರಣಗಳು ನಮ್ಮನ್ನು ಕಾಡದೇ ಇರದು.

"ವಾರ್ತಾ ಇಲಾಖೆಯು ಬಿ. ಎಂ. ಗಿರಿರಾಜರವರ ನಿರ್ದೇಶನದಲ್ಲಿ "ಭಾರತ ಭಾಗ್ಯ ವಿಧಾತ" ಎನ್ನುವ ಬೆಳಕು ಮತ್ತು ಧ್ವನಿ ಪ್ರದರ್ಶನವನ್ನೂ ಅದ್ದೂರಿಯಾಗಿ ಆಯೋಜಿಸಿ ರಾಜ್ಯದ ಹಲವಾರು ಕಡೆಗೆ ಪ್ರದರ್ಶಿಸಲಾಯಿತು. ಈ ಎಲ್ಲ ನಾಟಕಗಳು ಅಂಬೇಡ್ಕರ್‌ರವರ ಬದುಕು ಬರಹ ಸಿದ್ಧಾಂತಗಳ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತಿದ್ದು ಅಂಬೇಡ್ಕರ್‌ರವರ ಕುರಿತು ಜನತ ಅರಿವನ್ನು ವಿಸ್ತರಿಸುವ ಕೆಲಸವನ್ನು ಮಾಡಿವೆ. " ಎಂದು ಶಶಿಕಾಂತ ಯಡಹಳ್ಳಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಜ್ಯೋತಿ ಬಾ ಪುಲೆ, ಪೆರಿಯಾರ್, ಶಾಹು ಮಹಾರಾಜ್, ಲೋಹಿಯಾ ಮತ್ತು ಡಾ. ಅಂಬೇಡ್ಕರ್ ಅವರ ಜೀವಪರ ಚಿಂತನೆಗಳ ಅರಿವು ಹೊಸ ತಲೆಮಾರಿನ ಮುನ್ನುಡಿಯಾಗಬೇಕಾಗಿದೆ.

## ಪರಾಮರ್ಶನ ಗ್ರಂಥಗಳು:


1. ಗುರುರತ್ನ ಬಾಬು ಡಿ. , (1990), ಭಾರತದ ಜೀವಂತ ಧ್ವನಿ, ಯುವವಾಣಿ ಕ್ರಿಯೇಟಿವ್ ಪ್ರಕಾಶನ, ಮೈಸೂರು.
2. ಜವರಯ್ಯ ಮ. ನ. , (2007), ಯುಗಾಂತರ, ಶೃತಿ ಗ್ರಾಫಿಕ್ಸ್ ಮೈಸೂರು.
3. ಭಾಸ್ಕರ್ ಟಿ. ಎಂ. , (2017), ನೀರು ಬೇಕು ನೀರು, ವಸಂತ ಪ್ರಕಾಶನ, ಬೆಂಗಳೂರು.
4. ಮುನಿವೆಂಕಟಪ್ಪ ವಿ. , (1994), ಬಾಲಕ ಅಂಬೇಡ್ಕರ್, ವಿಚಾರವಾದಿ ಪ್ರಕಾಶನ, ಮೈಸೂರು.
5. ಹನುಮಂತಯ್ಯ ಎಲ್. , (1998), ಅಂಬೇಡ್ಕರ್, ರಂಗನಿರಂತರ, ಬೆಂಗಳೂರು.


## ರಂಗ ಪಠ್ಯಗಳು:


1. ಲಕ್ಷ್ಮಣ್ ಕೆ. ಪಿ. , ದಕ್ಲಕಥಾ ದೇವಿ ಕಾವ್ಯ.
2. ಲಕ್ಷ್ಮಣ್ ಕೆ. ಪಿ. , ಪಂಚಮ ಪದ.
3. ಲಕ್ಷ್ಮಣ್ ಕೆ. ಪಿ. , ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ.
4. ಬೇಲೂರು ರಘನಂದನ್, ಅಕ್ಕಯ್.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.